# ರಶ್ಮಿಕಾ 'ನಂ.1?'



ಐಟಿ ದಾಳಿಯ ಬಳಿಕ ರಶ್ಮಿಕಾ ಮಂದಣ್ಣ ಸ್ಟಾರ್ ರೇಟಿಂಗ್‌ನಲ್ಲಿ ಏರಿಕೆಯಾಗಿದೆ. ತೆಲುಗು ಚಿತ್ರರಂಗದಲ್ಲಿ 'ಗೀತಾ ಗೋವಿಂದಂ' ಚಿತ್ರದ ಅದ್ಭುತ ಯಶಸ್ಸಿನ ಬಳಿಕ ರಶ್ಮಿಕಾ ಸಖತ್ ಜನಪ್ರಿಯತೆ ಗಳಿಸಿದಳು. ಅದರ ಜೊತೆಗೆ ವಿಜಯ ದೇವರಕೊಂಡ ಜೊತೆಗಿನ ನಿಕಟ ಸ್ನೇಹ ಕೂಡಾ ಹಲವು ಗಾಳಿಸುದ್ದಿಗಳಿಗೆ ಕಾರಣವಾಯಿತು. ಕನ್ನಡದಲ್ಲಂತೂ 'ತೆಲುಗಿನಲ್ಲಿ ಅತ್ಯಧಿಕ ಸಂಭಾವನೆ ಪಡೆಯುವ ನಟಿ ಈಕೆ' ಎಂದು ಸುದ್ದಿ ಹಬ್ಬಿದೆ.

ನಿಜಕ್ಕೂ ರಶ್ಮಿಕಾ ಮಂದಣ್ಣ ತೆಲುಗಿನಲ್ಲಿ ಅತ್ಯಧಿಕ ಸಂಭಾವನೆ ಪಡೆಯುವ ನಟಿಯೇ? ತೆಲುಗು ಚಿತ್ರರಂಗದ ಮೂಲಗಳ ಪ್ರಕಾರ ಖಂಡಿತಾ ಅಲ್ಲ. 'ಇತ್ತೀಚೆಗೆ ರಶ್ಮಿಕಾ ಒಂದು ತೆಲುಗು ಚಿತ್ರಕ್ಕೆ ಒಂದು ಕೋಟಿ ರೂಪಾಯಿ ಸಂಭಾವನೆ ಪಡೆದಿದ್ದಾಳೆ. ಮುಂದಿನ ಮೂರು ಚಿತ್ರಗಳಿಗೆ ತಲಾ ಒಂದೂಕಾಲು ಕೋಟಿ ರೂಪಾಯಿ ಸಂಭಾವನೆ ಫಿಕ್ಸ್ ಆಗಿದೆ' ಎನ್ನುವುದು ಐಟಿ ದಾಳಿಗೆ ಮುನ್ನ ಹರಡಿದ್ದ ಸುದ್ದಿ. ತೆಲುಗಿನಲ್ಲಿ ಒಂದು ಕೋಟಿ ರೂಪಾಯಿ ಸಂಭಾವನೆ ಹೀರೋಯಿನ್‌ಗಳ ಮಟ್ಟಿಗೆ ದೊಡ್ಡ ಸುದ್ದಿಯೇ ಅಲ್ಲ. ಹಲವು ವರ್ಷಗಳ ಹಿಂದೆಯೇ ತೆಲುಗು ಚಿತ್ರರಂಗದ 'ಲೇಡಿ ಅಮಿತಾಭ್' ಎಂದು ಖ್ಯಾತಿ ಪಡೆದ ವಿಜಯಶಾಂತಿ ಆ ಕಾಲದಲ್ಲೇ ಒಂದೂವರೆ ಕೋಟಿ ರೂಪಾಯಿಗಳಷ್ಟು ಸಂಭಾವನೆ ಪಡೆದದ್ದು ಸುದ್ದಿಯಾಗಿತ್ತು. ಸದ್ಯಕ್ಕೆ ಇರುವ ಮಾಹಿತಿಯ ಪ್ರಕಾರ, ಅನುಷ್ಕಾ ಶೆಟ್ಟಿ ತೆಲುಗಿನಲ್ಲಿ ಅತ್ಯಧಿಕ ಸಂಭಾವನೆ ಪಡೆಯುವ ನಟಿ. 37ರ ಹರೆಯದ ಆಕೆ ಚಿತ್ರವೊಂದಕ್ಕೆ ಪಡೆಯುವ ಸಂಭಾವನೆ 3 ಕೋಟಿ ರೂಪಾಯಿ ಎನ್ನಲಾಗುತ್ತಿದೆ. ಆಕೆ ನಟಿಸಿರುವ 'ವಿಕ್ರಮಾರ್ಕುಡು', 'ಅರುಂಧತಿ', 'ವೇದಂ' 'ರುದ್ರಾಮದೇವಿ' 'ಭಾಗಮತೀ' ಮುಂತಾದ ಚಿತ್ರಗಳು ಬಾಕ್ಸಾಫೀಸ್ ಕೊಳ್ಳೆ ಹೊಡೆದದ್ದು ಆಕೆಯನ್ನು ನಂಬರ್ ಒನ್ ಸ್ಥಾನಕ್ಕೇರಿಸಿದೆ.

ಸಮಂತಾ, ತೆಲುಗಿನಲ್ಲಿ ಚಿತ್ರವೊಂದಕ್ಕೆ 2 ಕೋಟಿ ರೂಪಾಯಿ ಪಡೆಯುತ್ತಿದ್ದಾಳೆ. ಹಿಂದಿಯಿಂದ ಬಂದು ತೆಲುಗಿನವಳೇ ಆದ ಕಾಜಲ್ ಅಗರ್‌ವಾಲ್ ಮತ್ತು 'ಮಹಾನಟಿ' ಚಿತ್ರದಿಂದ ಖ್ಯಾತಳಾದ ಕೀರ್ತಿ ಸುರೇಶ್ ಒಂದೂವರೆ ಕೋಟಿ ರೂಪಾಯಿ ಪಡೆಯುತ್ತಿದ್ದಾರೆ. 'ನನ್ನಕು ಪ್ರೇಮತೊ' ಚಿತ್ರದ ನಂತರ ತೆಲುಗಿನಲ್ಲಿ 'ಹಾಟ್ ಫೇವರೆಟ್' ಎನ್ನಿಸಿಕೊಂಡಿರುವ ರಕುಲ್‌ಪ್ರೀತ್ ಸಿಂಗ್ ಒಂದು ಕೋಟಿ ರೂಪಾಯಿ ಸಂಭಾವನೆಯ ನಟಿಯಾಗಿದ್ದಾಳೆ.

ಹೀಗಿರುವಾಗ ರಶ್ಮಿಕಾ ಅತ್ಯಧಿಕ ಸಂಭಾವನೆ ಪಡೆಯುವ ನಟಿ ಎಂದು ಸುದ್ದಿ ಹಬ್ಬಿಸಿದವರು ಯಾರು? ಆಕೆ ಮತ್ತು ವಿಜಯ ದೇವರಕೊಂಡ ಅಭಿಮಾನಿಗಳದ್ದೇ ಈ ಕೆಲಸ ಎನ್ನುವುದು ಬಲ್ಲವರ ಮಾತು. ಈ ಪ್ರಚಾರವೇ ರಶ್ಮಿಕಾ ಮೇಲೆ ಐಟಿ ಅಧಿಕಾರಿಗಳು ಕಣ್ಣಿಡಲು ಕಾರಣ ಎನ್ನಲಾಗುತ್ತಿದೆ. ಸಂಭಾವನೆಯ ವಿಚಾರದಲ್ಲಿ ಅತ್ಯುತ್ಸಾಹದ ಸುದ್ದಿಗಳು ತಾರೆಯರಿಗೆ ಪ್ರಚಾರ ನೀಡಬಹುದು. ಆದರೆ ವೈಯಕ್ತಿಕ ಜೀವನದಲ್ಲಿ ಅವರಿಗೆ ತೊಂದರೆಯನ್ನೂ ನೀಡುತ್ತದೆ ಎನ್ನುವುದು ರಶ್ಮಿಕಾ ಪ್ರಕರಣದ ಪಾಠ. ಆದರೆ ರಶ್ಮಿಕಾ ಅಭಿಮಾನಿಗಳಂತೂ ಐಟಿ ದಾಳಿಯ ಬಳಿಕ ಇನ್ನಷ್ಟು ಖುಷಿಯಾಗಿದ್ದಾರಂತೆ. ಐಟಿ ದಾಳಿಯ ಬಳಿಕ ತಮ್ಮ ಮೆಚ್ಚಿನ ನಟಿ ಈಗ ದಕ್ಷಿಣದ ಸೂಪರ್‌ಸ್ಟಾರ್‌ಗಳ ಪಟ್ಟಿಗೆ ಸೇರಿದ್ದಾರೆ ಎನ್ನುವುದು ಅವರ ಖುಷಿಗೆ ಕಾರಣವಂತೆ!

ಐಟಿ ದಾಳಿಯ ಪರಿಣಾಮ ಏನೇ ಆಗಲಿ, ಜನವರಿ ಕೊನೆಗೆ ಬಿಡುಗಡೆ ಆಗಲಿರುವ ಕನ್ನಡದ 'ಪೊಗರು' ಚಿತ್ರದಲ್ಲಿ ರಶ್ಮಿಕಾಳನ್ನು ನೋಡಲು ಪ್ರೇಕ್ಷಕರ ನೂಕುನುಗ್ಗಲು ಆಗುವುದಂತೂ ಖಚಿತ. ಫೆಬ್ರುವರಿಯಲ್ಲಿ ಬಿಡುಗಡೆಯಾಗಲಿರುವ ತೆಲುಗಿನ 'ಭೀಷ್ಮ' ಚಿತ್ರಕ್ಕೂ ಈ ದಾಳಿಯಿಂದಾಗಿ ಬೇಡಿಕೆ ಕುದುರಿದೆಯಂತೆ.

■ ಬಿಂದು

# ತಲೈವಿ ಕಂಗನಾ

ತಲೈವಿ ಕಂಗನಾ ಮಿಳುನಾಡಿನ ಮುಖ್ಯಮಂತ್ರಿಯಾಗಿ ಜನಪ್ರಿಯತೆಯ ತುತ್ತತುದಿಗೇರಿದ್ದ ಜಯಲಲಿತಾ ಕುರಿತ 'ತಲೈವಿ' ಚಿತ್ರಕ್ಕೆ ಕಂಗನಾ ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಂಡಿದ್ದಾಳಂತೆ. ಚಿತ್ರರಂಗದಲ್ಲಿ ಜಯಲಲಿತಾಗೆ ಖ್ಯಾತಿ ತಂದುಕೊಟ್ಟ ಹಳೆಯ ಚಿತ್ರಗಳನ್ನೆಲ್ಲ ನೋಡಿದ್ದಲ್ಲದೆ, ರಾಜಕೀಯ ರಂಗದಲ್ಲಿ ಆಕೆಯ ಎಲ್ಲ ಸಾಧನೆಗಳ ಬಗ್ಗೆಯೂ ಕಂಗನಾ ಅಧ್ಯಯನ ನಡೆಸಿದ್ದಾಳಂತೆ.

ಜಯಲಲಿತಾ ರೂಪದಲ್ಲಿ ಕಂಗನಾ ಹೇಗೆ ಕಾಣಿಸುತ್ತಾಳೆ ಎನ್ನುವ 'ಫಸ್ಟ್ ಲುಕ್' ಈಗಾಗಲೇ ಜನಪ್ರಿಯವಾಗಿದೆ. ಈಗ ಈ ಚಿತ್ರದಲ್ಲಿ ಎಂಜಿಆರ್ ಪಾತ್ರ ನಿರ್ವಹಿಸುತ್ತಿರುವ ಅರವಿಂದ ಸ್ವಾಮಿಯ 'ಫಸ್ಟ್ ಲುಕ್' ಕೂಡಾ ಹೊರಬಿದ್ದಿದೆ. ತಮಿಳಿನ ಸುಂದರಾಂಗ ನಟ ಅರವಿಂದ ಸ್ವಾಮಿ, ಹೇರ್‌ಸ್ಟೈಲ್ ಬದಲಿಸಿಕೊಂಡು ಮೀಸೆ ಬೋಳಿಸಿಕೊಂಡು ಮೇಕಪ್ ಹಚ್ಚಿ ಕಪ್ಪು ಕನ್ನಡಕ ಧರಿಸಿ ನೀಡಿರುವ 'ಎಂಜಿಆರ್ ಲುಕ್' ತಮಿಳು ಚಿತ್ರರಂಗದಲ್ಲಿ ಹೊಸ ಸಂಚಲನ ಮೂಡಿಸಿದೆಯಂತೆ. ಚಿತ್ರ ಹಿಂದಿಯಲ್ಲೂ ಬಿಡುಗಡೆ ಆಗುತ್ತಿದೆ. ಈ ಹಿಂದೆ 'ರೋಜಾ' ಮತ್ತು 'ಬಾಂಬೆ' ಚಿತ್ರಗಳಲ್ಲಿ ಬಾಲಿವುಡ್ ಪ್ರೇಕ್ಷಕರ ಮನ ಗೆದ್ದಿದ್ದ ಅರವಿಂದ ಸ್ವಾಮಿ ಈ ಚಿತ್ರದೊಂದಿಗೆ ಬಾಲಿವುಡ್‌ಗೆ ರೀ ಎಂಟ್ರಿ ಕೊಟ್ಟಂತಾಗಿದೆ. ■

